ಇ) ಹಾವೇರಿ ಗದಗ ಮತ್ತು ಧಾರವಾಡ ಜಿಲ್ಲೆಯಲ್ಲಿ ವಸತಿ ರಹಿತ ಬೀಡಿ ಕಾರ್ಮಿಕರ ಸಂಖ್ಯೆ ಎಷ್ಟು? (ವಿವರ ನೀಡಿರುವುದಿಲ್ಲ)

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಹೌದು

ಆ) ಬೀಡಿ ಕಾರ್ಮಿಕರಿಗಾಗಿ ಕೇಂದ್ರ ಸರ್ಕಾರವು ರೂಪಿಸಿರುವ ಇಂಟಿಗ್ರೇಟೆಡ್ ಹೌಸಿಂಗ್ ಸ್ಕೀಂ ನಡಿಯಲ್ಲಿ ಸಹಾಯಧನ ಪಡೆದು ರಾಜ್ಯದಲ್ಲಿ ಪ್ರಸಕ್ತ ಸಾಲಿನಲ್ಲಿ ವಸತಿರಹಿತ ಬೀಡಿ ಕಾರ್ಮಿಕರಿಗೆ 5000 ಮನೆಗಳನ್ನು ನಿರ್ಮಿಸಿಕೊಡುವ ಉದ್ದೇಶಿತ ಗುರಿ ಹೊಂದಲಾಗಿದೆ.

ಇ) ಹಾವೇರಿ, ಗದಗ ಹಾಗೂ ಧಾರವಾಡ ಜಿಲ್ಲೆಗಳಲ್ಲಿ ಕ್ರಮವಾಗಿ 2160, 98 ಮತ್ತು 1228 ಮಂದಿ ವಸತಿ ಬೀಡಿ ಕಾರ್ಮಿಕರಿರುತ್ತಾರೆ.

ರಾಜ್ಯದಲ್ಲಿ ಹೊಸ ಐ.ಟಿ.ಐ. ತರಬೇತಿ ಸ್ಥಾಪಿಸುವುದು

1058 (1085) ಶ್ರೀ ಹೊನ್ನಳ್ಳಿ ಜಬ್ಬಾರ್‌ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001ನೇ ಸಾಲಿನಲ್ಲಿ ಹೊಸ ಐ.ಟಿ.ಐ ತರಬೇತಿ ಸಂಸ್ಥೆಯನ್ನು ಸ್ಥಾಪಿಸಲು ಸರ್ಕಾರ ಉದ್ದೇಶಿಸಿದೆಯೆ;

ಆ) ಹಾವೇರಿ, ಗದಗ ಮತ್ತು ಧಾರವಾಡ ಜಿಲ್ಲೆಯಲ್ಲಿ ಹೊಸ ಐ.ಟಿ.ಐ. ಪ್ರಸ್ತಾವನೆಯಿದ್ದಲ್ಲಿ ಅವು ಯಾವುವು; ವಿವರ ನೀಡುವುದು; ಮಂಜೂರಾತಿಗೆ ಇಲಾಖೆಯಿಂದ ಸರ್ಕಾರಕ್ಕೆ ಪ್ರಸ್ತಾವನೆ ಬಂದಿದೆಯೆ;

ಇ) ಬಂದಿದ್ದಲ್ಲಿ ಹೊಸ ಐ.ಟಿ.ಐ. ತರಬೇತಿ ಸಂಸ್ಥೆ ಮಂಜೂರಾತಿ ನೀಡಲು ವಿಳಂಬಕ್ಕೆ ಕಾರಣವೇನು; ಮತ್ತು ಯಾವಾಗ ಮಂಜೂರಾತಿ ನೀಡಲಾಗುವುದು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :

ಅ) ಹೌದು

ಆ) ಗದಗ ಜಿಲ್ಲೆಯ ''ನರಗುಂದ'' ಹಾಗೂ ಹಾವೇರಿ ಜಿಲ್ಲೆಯ ಹಾವೇರಿಯಲ್ಲಿ ಐ.ಟಿ.ಐ. ಸ್ಥಾಪಿಸುವ ಪ್ರಸ್ತಾವನೆ ಸರ್ಕಾರಕ್ಕೆ ಇಲಾಖೆಯಿಂದ ಬಂದಿರುತ್ತದೆ.

ಇ) 2000-2001ನೇ ಸಾಲಿನಲ್ಲಿ ಪರಿಗಣಿಸಲಾಗಿಲ್ಲ. 2001-2002ನೇ ಸಾಲಿನಲ್ಲಿ ಪರಿಶೀಲಿಸಲಾಗುವುದು

ರಾಜ್ಯದಲ್ಲಿ ಹೊಸ ಪಶುವೈದ್ಯ ಆಸ್ಪತ್ರೆಗಳು

1059 (1087) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್‌ಖಾನ್ (ಹುಬ್ಬಳ್ಳಿ) : ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2000-2001ನೇ ಸಾಲಿನಲ್ಲಿ ಪಶುವೈದ್ಯ ಆಸ್ಪತ್ರೆಗಳನ್ನು ಮಂಜೂರು ಮಾಡಲಾಗಿದೆಯೇ? ಮಾಡಿದ್ದಲ್ಲಿ ರಾಜ್ಯದ ಯಾವ ಯಾವ ಭಾಗಕ್ಕೆ ಮಂಜೂರು ಮಾಡಲಾಗಿದೆ? ಸಂಪೂರ್ಣ ಮಾಹಿತಿ ಒದಗಿಸುವುದು?

ಆ) ಪಶುವೈದ್ಯ ಆಸ್ಪತ್ರೆಗಳಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ಹುದ್ದೆಗಳನ್ನು ತುಂಬಲು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

ಅ) ಇಲ್ಲ

ಆ) ಉದ್ಭವಿಸುವುದಿಲ್ಲ

ಇ) ಬಂದಿದೆ. ಪಶುವೈದ್ಯಾಧಿಕಾರಿಗಳನ್ನು ಹಾಗೂ ಪಶುವೈದ್ಯಕೀಯ ಸಹಾಯಕರನ್ನು ಗುತ್ತಿಗೆ ಆಧಾರದ ಮೇಲೆ ತುಂಬಲು ಸರ್ಕಾರ ಈಗಾಗಲೇ ಸಂಬಂಧಿಸಿದ ಜಿಲ್ಲಾ ಅಧಿಕಾರಿಗಳಿಗೆ ಅಧಿಕಾರ ನೀಡಿದೆ. ಪಶುವೈದ್ಯಕೀಯ ಪರೀಕ್ಷಕರನ್ನು ನೇಮಕಾತಿಯ ವಿಶೇಷ ನಿಬಂಧನೆಗಳಡಿಯಲ್ಲಿ ತುಂಬಲು ಕ್ರಮ ಕೈಗೊಳ್ಳಲಾಗುತ್ತಿದೆ.

ಧಾರವಾಡ ಹಾಲು ಒಕ್ಕೂಟದಲ್ಲಿ ಹಾಲು ಉತ್ಪಾದನೆ

1060 (1088) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ : ಮಾನ್ಯ ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಧಾರವಾಡ ಹಾಲು ಒಕ್ಕೂಟದಲ್ಲಿ ಪ್ರತಿದಿನ ಎಷ್ಟು ಲೀಟರ್ ಹಾಲು ಹಾಗೂ ಹಾಲಿನ ಉತ್ಪಾದನೆ ಉತ್ಪಾದಿಸಲಾಗುತ್ತಿದೆ.

ಆ) ಧಾರವಾಡ ಹಾಲು ಒಕ್ಕೂಟದಲ್ಲಿ ಉತ್ಪಾದಿಸಲಾಗುತ್ತಿರುವ ಪ್ರತಿದಿನ ಹಾಲು ಹಾಗೂ ಹಾಲಿನ ಉತ್ಪಾದನೆಗಾಗಿ ಎಷ್ಟು ಹಣ ಖರ್ಚು ಮಾಡಲಾಗುತ್ತಿದೆ.

ಇ) ಧಾರವಾಡ ಹಾಲು ಒಕ್ಕೂಟವು ಹಾನಿಯಲ್ಲಿದೆ ಎಂಬ ವಿಷಯ ತಮ್ಮ ಗಮನಕ್ಕೆ ಬಂದಿದೆಯೇ?

ಈ) ಒಟ್ಟು ಹಾನಿಯಾದ ಹಣವೆಷ್ಟು? ಹಾನಿಯಾದ ಹಣದಲ್ಲಿ ಮರು ಪಾವತಿಯಾದ ಹಣವೆಷ್ಟು?

ಶ್ರೀ ಎ. ಕೃಷ್ಣಪ್ಪ (ಪಶುಸಂಗೋಪನೆ ಮತ್ತು ಸಕ್ಕರೆ ಸಚಿವರು) :

ಅ) ಹಾಲಿನ ಪ್ರತಿದಿನ ಧಾರವಾಡ ಹಾಲು ಒಕ್ಕೂಟವು 57,802 ಲೀಟರ್ ಪಾಲನ್ನು ಶೇಖರಿಸುತ್ತಿದೆ. ಹಾಲಿ ಸರಾಸರಿ ದಿನವಹಿ ಉತ್ಪಾದಿಸುವ ಉತ್ಪನ್ನಗಳ ವಿವರ ಈ ಕೆಳಕಂಡಂತಿದೆ: